ಸಾಕ್ಷಿಯನ್ನು ದಿಃ 04-02-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್ ಎನ್ ಎ ವಕೀಲರಿಂದ (ವಾದಿ ಪರವಾಗಿ)**

ಮುಖ್ಯ ವಿಚಾರಣೆಯನ್ನು ನಮ್ಮ ವಕೀಲರು ಬರೆಯಿಸಿದ್ದಾರೆ. ಪ್ರತಿವಾದಿ ನಂ.1 ರಿಂದ 3 ಒಂದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದೇವೆಂದ್ರಗೌಡ ಮತ್ತು ಶಿವನಗೌಡರ ನಡುವೆ ಯಾವುದೇ ಪಾಲು ವಾಟ್ನಿಯಾಗಿಲ್ಲ ಎಂದರೆ ಸರಿ. 3 ನೇ ವಾದಿ ಇವರು 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ಅವರ ನಡುವೆ ಮನಸಾ ಮನಸಾ ಸರಿಯಿರಲಿಲ್ಲ ಎಂದರೆ ಗೊತ್ತಿಲ್ಲ. ದೇವೆಂದ್ರಗೌಡ ಹಾಗೂ ಪ್ರತಿವಾದಿ ನಂ.1 ರಿಂದ 3 ಮಿಲಾಪಿಯಾಗಿ ದಾವಾ ಆಸ್ತಿಯಲ್ಲಿನ ವಾದಿಯರ ಹಕ್ಕನ್ನು ನಷ್ಟಗೊಳಿಸುವ ಉದ್ದೇಶದಿಂದ ನನ್ನ ಹೆಸರಿಗೆ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಯರ ಹಕ್ಕಿನ ಬಗ್ಗೆ ಗೊತ್ತದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಖರೀದಿಸುವ ಮೊದಲು ವಾದಿಯರ ಹಕ್ಕಿನ ಬಗ್ಗೆ ವಿಚಾರಿಸಿದ್ದೀರಾ ಎಂದರೆ 3 ನೇ ಪ್ರತಿವಾದಿ ವಾದಿ 1 ನೇ ಪ್ರತಿವಾದಿಯೊಂದಿಗೆ ಲಗ್ನ ಆಗಿಲ್ಲ ಹಾಗಾಗಿ ಅವರನ್ನು ವಿಚಾರಿಸಿಲ್ಲ ಎಂದು ಹೇಳುತ್ತಾರೆ. 1 ನೇ ವಾದಿಯ ಮದುವೆ 3 ನೇ ಪ್ರತಿವಾದಿಯೊಂದಿಗೆ 2007 ರಲ್ಲಿ ಆಗಿದೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ನಾನು ಖೊಟ್ಟಿ ಖರೀದಿಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಮಾಣೀಕ ಖರೀದಿದಾರರನಲ್ಲ ಹಾಗೂ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.1 ರಿಂದ 3 ಗೈರು ಹಾಜರಿರುವ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.